ಸಣ್ಣ ಹುಡುಗರಿಬ್ಬರೂ ಆಗಲೇ ಸಿದ್ಧವಾಗಿ ಬಂದು, ನಡುಮನೆಯ ಮಣೆಗಳ ಮೇಲೆ ಸ್ಥಾಪನೆ ಆಗಿಯಾಯ್ತು. ಅವುಗಳದು ಒಂದೇ ವರಾತ. 'ಶಾಲೆಗೆ ಹೊತ್ತಾಯ್ತು ಅಮ್ಮ... ನೀನಿನ್ನೂ ತಿಂಡಿ ಬಡಿಸಿಯೇ ಇಲ್ಲ...'

ನಾಗಮ್ಮನಿಗೂ ಗಡಿಬಿಡಿಯೇ. ಈ ಬೆಳಿಗ್ಗೆ ಎಂಬುದು ಯಾಕಾದರೂ ಆಗ್ತದೋ ಎಂದು ಗೊಣಗುತ್ತಾಳೆ ಒಮ್ಮೊಮ್ಮೆ. ಒಟ್ಟೊಟ್ಟಿಗೇ ಎಷ್ಟೊಂದು ಕೆಲಸಗಳು! ಒಂದು ಕಡೆ ಎಮ್ಮೆಗೆ ಕಲಗಚ್ಚು ತಯಾರು ಮಾಡ್ತಾ ಇದ್ದಾಳೆ. ಒಲೆ ಮೇಲೆ ಹಾಲು ಕಾಯ್ತಾ ಇದೆ. ಮಕ್ಕಳಿಗೆ ತಡವಾಗ್ತದೆಂದು ಗಡಗಡಾಂತ ತೊಗರಿ ಚಟ್ನಿ ಅರೀತಾ ಇದಾಳೆ!

'ಅಮ್ಮ ಹೊತ್ತಾಯ್ತು.. ತಡ ಆದ್ರೆ ಟೀಚರು ಬೈತಾರೆ...'

ಸೋಮ, ಸೀನ ಮತ್ತೆ ದನಿಯೆತ್ತಿ ಕೂಗಿದವು. 'ತಾಳ್ರೋ ಬಂದೆ... ಚಟ್ನಿ ಅರೆದಾಯ್ತು.. ಹಿತ್ತಲಲ್ಲಿ ಹಂಡೇಲಿ ಹಲಸಿನ ಕೊಟ್ಟೆ ಬೆಂದಿದೆ. ಹೋಗೋದು, ತರೋದು ಅಷ್ಟೇ..'

ನಾಗಮ್ಮ ನಿನ್ನೆ ತಡರಾತ್ರಿಯವರೆಗೂ ಕೂತು ಹಂಡೆ ತುಂಬ ಕೊಟ್ಟೆ ಕಡುಬು ತಯಾರಿಸಿ ಸೇರಿಸಿ ಸೇರಿಸಿ ಇಟ್ಟಿದ್ದಳು. ಒಲೇಲಿ ಮಂದ ಉರಿ ಮಾಡಿ ಬಂದಿದ್ದಳು. ಬೆಳಗಿನ ಜಾವದ ವೇಳೆಗೆ ಘಮಘಮ ಹಲಸಿನ ಕುಡುಬು ತಯಾರಿಸಿ, ಆಸುಪಾಸಿನಲ್ಲಿ ಓಡಾಡುವವರ ಬಾಯಲ್ಲಿ ನೀರೂರಿಸಿ ಬಿಡುವುದಿಲ್ಲವೇ? ನಾಗಮ್ಮ ಮಕ್ಕಳ ಕೋಲಾಹಲದ ನಡುವೆಯೇ ಚಟ್ನಿ ಅರೆದು ಎತ್ತಿಟ್ಟಳು. ಪಕ್ಕದಲ್ಲಿದ್ದ ಬಟ್ಟಲು ನೀರಲ್ಲಿ ಕೈಯದ್ದಿ ಸರಸರನೆ ಸೆರಗಿಗೆ ತೀಡಿಕೊಂಡು ಹಿತ್ತಲಿಗೆ ಓಡಿದಳು.

ವಿಶಾಲವಾದ ನೀರು ಮನೆಯ ಒಂದು ಶುಭ್ರ ಮೂಲೆಯಲ್ಲಿ ಕಡುಬು ಬೇಯಿಸುವ ದೊಡ್ಡ ಹಂಡೆ. ನಾಗಮ್ಮ ಬಂದು ಕೊಟ್ಟೆ ಕಡುಬು ತೆಗೆದು ಕೊಳ್ಳಲು ಸಂಭ್ರಮದಿಂದ ಹಂಡೆಯೊಳಗೆ ಕೈಯಿಟ್ಟಳು ಕಡುಬು ತಾಗಲಿಲ್ಲ. ಇನ್ನಷ್ಟು ಕೆಳಗೆ ಕೈಯನ್ನು ತೂರಿಸಿದಳು. ಆಗಲೂ ಇಲ್ಲ! ಮತ್ತಷ್ಟು ಮತ್ತಷ್ಟು ಕೆಳಕ್ಕೆ.... ಇಲ್ಲ, ಕಡುಬಿನ ಒಂದು ತುಂಡೂ ಕೈಗೆ ಬರಲಿಲ್ಲ. ಮೆಟ್ಟಿಂಗಾಲಿಕ್ಕೆ ಹಂಡೆಯೊಳಗೆ ಬಗ್ಗಿ ನೋಡ್ತಾಳೆ... ಹಂಡೆ ಪೂರಾ ಖಾಲಿ! ಇಡ್ಲಿ ಪುಡಿ ಕೂಡ ಕಾಣಲಿಲ್ಲ!

ನಾಗಮ್ಮ ತಲೆಯ ಮೇಲೆ ಕೈಹೊತ್ತು ಕೂತು ಬಿಟ್ಟಳು. ದೇವ್ರೇ... ಬೊಗಸೆ ತುಂಬ ಕೈಯೆತ್ತಿ ಎಲ್ರಿಗೂ ಕಡುಬು ಕೊಡೋಣ ಅಂತ ಮಾಡಿದ್ನಲ್ಲ... ಒಂದೂ ಇಲ್ದೆ ಖಾಲಿ ಮಾಡಿ ಬಿಟ್ಟಿದ್ದಾನಲ್ಲ... ಕಳ್ಳ! ನಡುಮನೇಲಿ ಮಕ್ಕಳು ತಿಂಡಿಗೆ ಕಾಯ್ತಾ ಕೂತಿರೋದು ನೆನಪಾಯ್ತು. ಓಡಿದಳು ಭರ್ರನೆ. 'ಮಕ್ಕಳೇ.. ಕಡುಬು ಇಲ್ಲ ಇವತ್ತು... ಇನ್ನೊಮ್ಮೆ ಮಾಡಿ ಕೊಡ್ತೀನಿ ಆಯ್ತಾ?' ಅಂತ ಹೇಳಿ ಬೇಗ ಬೇಗ ಅವಲಕ್ಕಿ–ಮೊಸರು ಕಲಸಿದಳು. ಅದನ್ನೇ ಚಟ್ನಿ ಜತೆ ಬಡಿಸಿದಳು. ಉಂಡು ಓಡಿದವು ಮಕ್ಕಳು.

ಚಟ್ನಿ ಅರೆದ ಒರಳನ್ನು ಶುಚಿ ಮಾಡುತ್ತಾ ಇರುವಾಗ, 'ನಾಗಕ್ಕಾ, ಒಂದ್ಲೋಟ ಹಾಲು ಇದ್ಯಾ?' ಪಕ್ಕದ ಮನೆ ಹನುಮೇಗೌಡನ ಮಗಳು ತುಳಸಿ ನಗು ನಗುತ್ತಾ ಅಡುಗೆ ಮನೆಗೆ ಬಂದಳು. 'ಬಾರೇ ತುಳಸಿ, ನಿನ್ನೆ ರಾತ್ರಿ ಬಂದ್ಯಾ? ನಿನ್ನ ಅತ್ತೆ ಮನೇಲಿ ಎಲ್ಲ ಚೆನ್ನಾಗಿದಾರಾ?'

ಪ್ರೀತಿಯಿಂದ ಮಣೆ ಹಾಕಿ ಕೂರಿಸಿದಳು ನಾಗಮ್ಮ. ಈ ಹುಡುಗಿಯಲ್ಲಿ ಬಹಳ ಅಕ್ಕರೆ ಅವಳಿಗೆ. ಮೊನ್ನೆ ಮೊನ್ನೆ ಮದುವೆ ಆಗುವವರೆಗೂ ನಾಗಕ್ಕ ನಾಗಕ್ಕ ಅಂತ ಹಿಂದೆ ಹಿಂದೆಯೇ ಸುತ್ತುತ್ತಿದ್ದಳು.

'ಕಾಫೀ ಮಾಡ್ತೀನಿ ತಾಳೇ ತುಳಸಿ...' ನಾಗಮ್ಮ ಒಲೆ ಬಳಿ ಹೋಗುತ್ತಿದ್ದಂತೆ 'ಬೇಡ ಬೇಡ ನಾಗಕ್ಕ... ಒಂದ್ಲೋಟ ಹಾಲು ಕೊಟ್ರೆ ಸಾಕು. ಮನೇಗೇ ಹೋಗ್ತೀನಿ. ಅಮ್ಮ ಕಾಯ್ತಿದಾಳೆ' ತಡೆದಳು ತುಳಸಿ.

'ಒಂದ್ಲೋಟ ಯಾಕೆ? ಒಂದು ಚೊಂಬೇ ಕೊಡ್ತೀನಿ'.

'ಅಷ್ಟೊಂದು ಹಾಲು ಇದ್ಯಾ ನಾಗಕ್ಕ?'

'ಹ್ಞೂ ಕಣೇ... ನಮ್ಮ ಕಪಿಲೆ ಎಮ್ಮೆಗೆ ಎರಡೇ ಮೊಲೆ ಅಲ್ವಾ? ಹುಟ್ಟುವಾಗ್ಲೇ ಹಾಗೆ ಅದು! ಎರಡೇ ಮೊಲೆ ಆದ್ರೂ ಹಾಲು ಧಂಡಿಯಾಗಿ ಕೊಡ್ತದೆ... ಆದ್ರೆ ಜನ ಕೊಳ್ಳಲ್ಲ ನೋಡು.. 'ಎರಡು ಮೊಲೆ ಇರೋ ಎಮ್ಮೇ ಹಾಲು ಕುಡುದ್ರೆ.. .. ಮನುಷ್ಯನ ಹಾಲು ಕುಡಿದ್ಹಂಗೆ... ಪಾಪ ಬರ್ತದೆ' ಅಂತ ಅಂಜ್ತಾರೆ. ನಾವೇ ಎಲ್ಲ ಕುಡ್ದು ಮುಗಿಸ್ಬೇಕು ನೋಡು' ನಗುತ್ತಲೇ ಪಾತ್ರೆ ಭರ್ತಿ ಹಾಲು ತುಂಬಿ ತುಳಸಿಯ ಕೈಗಿತ್ತಳು.

'ತಿಂಡಿ ಏನೇ ಇವತ್ತು ನಿಮ್ಮನ್ಲಿ?' ಅಂದಳು.

'ರೊಟ್ಟಿ, ಮೊಟ್ಟೆ ಪಲ್ಯ. ಮೊಟ್ಟೆ ನಾನೇ ತಂದಿದ್ದು. ನಮ್ಮಪ್ಪನಿಗೆ ಮನೇಲಿ ಆದ ಕೋಳಿ ಮೊಟ್ಟೆ ತುಂಬ ಇಷ್ಟ. ಅದಕ್ಕೇ ಮನೆಯಿಂದ ತಂದೆ' ತುಳಸಿ ಹೇಳಿದಳು.

ಮೊಟ್ಟೆ ಬೇಯುವ ವಾಸನೆ ಮೂಗಿಗೆ ಅಡರಿದಂತೆ ಆಗಿ ವಾಕರಿಗೆ ಬಂದರೂ, ನಾಗಮ್ಮನಿಗೆ ತುಳಸಿ ಪ್ರೀತಿ ಪಾತ್ರಳು. ಸಹಿಸಿಕೊಂಡಳು.

'ಅಯ್ಯೋ ಮಾತಾಯಿ, ಮೊಟ್ಟೆ ಹೇಗೆ ತಂದ್ಯೇ... ಅಷ್ಟು ದೂರದ ಬೊಂಬಾಯಿಂದ.. ಒಂದೂ ಒಡೀದೇನೇ? ಬೆರಗಿನಿಂದ ಕೇಳಿದಳು.

'ಏನಿಲ್ಲ ನಾಗಕ್ಕಾ... ಗೋಧಿ ಹಿಟ್ಟನ್ನು ಚಪಾತಿ ಹಿಟ್ಟು ಕಲಸಿದ ಹಾಗೆ ಕಲಸಿ ಡಬ್ಬಿ ಭರ್ತಿ ತುಂಬಿಸಿದೆ. ಅಲ್ಲಲ್ಲೇ ಮೊಟ್ಟೆಗಳನ್ನು ಹುದುಗಿಸಿ ಬಿಟ್ಟೆ. ಮುಚ್ಚಳ ಬಿಗಿಯಾಗಿ ಮುಚ್ಚಿ ಬುಟ್ಟೀಲಿ ಇಟ್ಟುಕೊಂಡೆ. ಆಯ್ತಲ್ಲ ಬಂದೋ ಬಸ್ಸು! ಡಬ್ಬಿ ಅಲ್ಲಾಡಿದ್ರೂ.. ಮೊಟ್ಟೆ ಅಲ್ಲಾಡ್ಲಿಲ್ಲ... ಹಹ್ಹಹ!'

'ಜಾಣೆ ಕಣೇ ತುಳಸಿ.. ಇಲ್ದಿದ್ರೆ ಬೊಂಬಾಯಿ ಸೀಮೆ ಹುಡ್ಗ ನಿನ್ನ ಮೆಚ್ಚಿ ಕಟ್ಟಿಕೋತಾ ಇದ್ನಾ?'

* * *

ನಾಗಮ್ಮ ಜಗಲೀಲಿ ಕೂತು ಸಿದ್ದನ ಕೈಲಿ ಕೆಲಸ ಮಾಡಿಸ್ತಾ ಇದ್ದಳು. ರಾಶಿ ರಾಶಿ ಮೊಟ್ಟೆಕಾಯಿಗಳನ್ನು ಕ್ಷಣಾರ್ಧದಲ್ಲಿ ಸುಲಿ ಸುಲಿದು ಸೇರಿಸ್ತಾ ಇದ್ದ. ಮಧ್ಯೆ ಮಧ್ಯೆ ಮಾತುಕತೆ.

ಸಿದ್ದನಿಗೆ ನಾಗಮ್ಮನಲ್ಲಿ ಬಲು ವಿಶ್ವಾಸ. ಕಾಡಿಗೆ ಹೋದರೆ ಈ ತಮ್ಮ ಒಡತಿಗಾಗಿ ಬಣ್ಣ ಬಣ್ಣದ ಹೂ ತಂದು ಕೊಡುವ. ದಪ್ಪದೊಂದು ಪೇರಿಲೆ ಹಣ್ಣನ್ನು ಅಂಗಿ ತುದಿಯಲ್ಲಿ ಕಟ್ಟಿಕೊಂಡು ತರುವ. ಈ ಹನುಮಂತನ ಪಾಲಿಗೆ ನಾಗಕ್ಕನೇ ಸೀತಾಮಾತೆ.

'ನೋಡೋ ಸಿದ್ಧ. ನಿಮ್ಗೆಲ್ಲ ಬೊಗಸೆ ತುಂಬ ಕೊಡಣ ಅಂತ ಹಂಡೆ ಭರ್ತಿ ಹಲಸಿನ ಕಡುಬು ಬೇಯಿಸಿದ್ದೆ. ಬೆಳಿಗ್ಗೆಯೆದ್ದು ನೋಡಿದ್ರೆ.. ಹಂಡೇನೇ ಬಾಚಿ ಬಿಟ್ಟಿದ್ದಾನೆ ಕಳ್ಳ..' ಅಳಲು ತೋಡಿಕೊಂಡಳು ನಾಗಮ್ಮ ಬಂಟನಲ್ಲಿ.

'ಅಯ್ಯೋ ಅಮ್ಮಣ್ಣೀ... ಇಡ್ಲೀನೂ ಕದ್ಕಂಡು ವೋದ್ರಾ? ವೋಗ್ಲಿ ಬುಡಿ... ಇಡ್ಲಿ ಕಳ್ಳಂಗೆ ಮೂರು ದಿನ ಅಬ್ಬ ಆತದೆ.'

ಸಿದ್ಧ ಹೊಟ್ಟೆ ಹಿಡಿದು ನಕ್ಕ. ನೆನೆನೆನೆದು ನಕ್ಕ.

'ಅದಿರ್ಲಿ ಕಣೋ ಸಿದ್ಧ... ಮೊನ್ನೆ ನೀನು ನಾಗನಕೋಟೆ ಜಾತ್ರೇಗೆ ಹೋಗಿದ್ಯಲ್ಲ... ಏನೋ ವಿಶೇಷ?'

'ಅಲ್ಲಂತು ಅಮ್ಮಣ್ಣೀ... ಶಾನೆ ಕುಶಾಲೇ ಆತು ನೋಡ್ರೀ,,,' ಸಿದ್ಧ ಮಾಡು ತಿದ್ದ ಕೆಲಸ ನಿಲ್ಲಿಸಿ, ಬಲು ಸಂಭ್ರಮದಿಂದ ನಾಗಕ್ಕನ ಹತ್ತಿರವೇ ಬಂದು ಬಿಟ್ಟ.

'ನಿಮಗ ಇದನ್ನ ಏಳೋ ಬೇಕು ಅಮ್ಮಣ್ಣೀ.... ಯೇನು ಮಾಡ್ದೆ ಏಳಲ್ರಾ? ಒಂಚು ಆಕಿ ಆ ಪೂಜಾರಿ ಮೈನ ಚೆನ್ನಾಗಿ ಉಜ್ಜಾಡಿ ಬಂದು ಬಿಟ್ಟೆನ್ರಿ... ಹಿಹ್ಹಿಹ್ಹಿ! ಅವಕ ಗೊತ್ತಾಗ್ಲೇ ಇಲ್ಲ... ಸುತ್ತ ಅಪಾಟಿ ಜನ...'

'ಅಯ್ಯೋ ರಾಮ! ಅವನ ಉಜ್ಜಾಡಿ ನಿಂಗೇನು ಬಂತೋ?'

'ಇನ್ನೇನ್ರ ಅಮ್ಮಣ್ಣಿ.. ಯಾವಾಕ ನನ ಕಂಡ್ರೂ ದೂರವೋಗು ದೂರವೋಗು ಅಂತ ಕೂಗತಾ ಇದ್ದನ್ರ... ಆಮೇಕೆ, ನಾನು ನಿಂತು ಬಂದ ಜಾಗ್ಕೆ ನೀರು ಆಕತಾ ಇದ್ದನ್ರ... ತುಂಬ ಕ್ವಾಪ ಇತ್ತು ನನಕ! ಅದಿಕ್ಕೇ ಮನ್ನೆ ಜಾತ್ರೇನಾಗೆ ಎರಡೂ ಕೈನಿಂದ ಅವನ ಮೈ ಪೂರ್ತಿ ಉಜ್ಜಿ ಉಜ್ಜಿ ಆಕಿದೀನಿ! ಮೈ ಮ್ಯಾಕ ದ್ಯಾವ್ರು ವೊತ್ಕಂಡು ತಕ ತಕ ಕುಣೀತಾ ಇದ್ದನ್ರ... ನಾನು ಅವನ ಮೈ ತೀಡಿದ್ದು ಅವನ್ಗ ತಿಳೀಲೇ ಲ್ಲ... ಹಿಹ್ಹಿಹ್ಹಿ!'

'ಅಯ್ಯೋ ಕದೀಮ' ಮನಸಾರೆ ನಕ್ಕಳು ನಾಗಮ್ಮ. ತನ್ನ ಸಾಹಸ ಕಾರ್ಯ ನೆನೆದು ಸಿದ್ದನೂ ನಗುತ್ತಲೇ ಇದ್ದ. ಅಷ್ಟರಲ್ಲೇ ದೂರದಲ್ಲಿ ಸುಬ್ಬಪ್ಪನೋರು ತಮ್ಮ ಮನೆ ಕಡೆಗೇ ಬರುವುದು ನಾಗಮ್ಮನಿಗೆ ಕಂಡಿತು. ಅವರು ಹೊದ್ದಿದ್ದ ಜರಿಶಾಲು ಬಿಸಿಲಿಗೆ ಮಿರಿ ಮಿರಿ ಮಿಂಚುತ್ತಿತ್ತು.'

ಥಟ್ಟನೆ ಮೇಲೆದ್ದಳು ನಾಗಮ್ಮ. ಮೈತುಂಬ ಸೆರಗು ಹೊದ್ದು ಸರಸರನೆ ಕೋಣೆಗೆ ಹೋದಳು. ಹೊರಗೆ ಹೊರಡಲು ಸಿದ್ಧವಾಗುತ್ತಿದ್ದ ಗಂಡನಿಗೆ ಸುಬ್ಬಪ್ಪ ತಮ್ಮ ಮನೆಗೆ ಬರುತ್ತಿರುವ ವಿಷಯವನ್ನು ತಿಳಿಸಿದಳು.

ಓಹೊಹೋ ಅನ್ನುತ್ತಾ ಸಂಭ್ರಮದಿಂದ ಹೊರ ಬಂದರು ಸೋಮಯ್ಯ. ಒಂದು ಒಳ್ಳೆಯ ಚಾಪೆಯನ್ನು ಹಾಸಿ, ಅಂಗವಸ್ತ್ರದಿಂದಲೇ ಧೂಳು ಕೊಡವುತ್ತಾ 'ದಯ ಮಾಡ್ಬೇಕು ಜಮೀನ್ದಾರ್ರು...' ಅಂತ ಪರಮ ಗೌರವದಿಂದ ಕೂರಿಸಿದರು.

'ಬೇಗ ಒಂದ್ಲೋಟ ಮಜ್ಜಿಗೆ ತಾ ಇವಳೇ...' ಮಡದಿಯನ್ನು ಕೂಗಿ ಕರೆದರು. ನಾಗಮ್ಮ ತಂದು ಕೊಟ್ಟ ಮಜ್ಜಿಗೆಯನ್ನು ಉಸ್ಸಂತ ಕುಡಿದು